**ಸಾಕ್ಷಿಯನ್ನು ದಿ:03.06.2019 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ: ವಾದಿ ಪರ ಶ್ರೀ. ಎ.ಎಂ.ಆರ್ ವಕೀಲರಿಂದ:**

ಪ್ರತಿವಾದಿಯರು ನನಗೆ ಬರೆದುಕೊಟ್ಟಂತಹ ಕ್ರಯದ ಕರಾರು ಪತ್ರವನ್ನು ಹಾಜರುಪಡಿಸಿರುತ್ತೇನೆ. ಸದರಿ ಕ್ರಯದ ಕರಾರು ಪತ್ರ ಸರಿಯಾದ ಮುದ್ರಾಂಕದ ಶುಲ್ಕವನ್ನು ಹೊಂದಿಲ್ಲವೆಂದು ಹೇಳಿ ಪ್ರತಿವಾದಿಯರ ಪರ ವಕೀಲರು ತಕರಾರು ಎತ್ತಿದ ಕಾರಣ ಸದರಿ ದಾಖಲೆಯ ಮೇಲೆ ವಾದವನ್ನು ಆಲಿಸಿ ಮುಂದಿನ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸಲಾಗಿರುತ್ತದೆ.

ದಾವಾ ಆಸ್ತಿ ಪ್ರತಿವಾದಿಯ ಹೆಸರಿನಲ್ಲಿದೆ ಎಂದು ತೋರಿಸಲು 1 ಪಹಣಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು, ನಾನು ಪ್ರತಿವಾದಿಯರಿಗೆ ಕ್ರಯ ಕರಾರು ಪತ್ರದ ಆಧಾರದ ಮೇರೆಗೆ ಸ್ವತ್ತನ್ನು ನೋಂದಣಿ ಮಾಡಿ ಕೊಳ್ಳುವಂತೆ ನೋಟೀಸ್ಸನ್ನು ನೀಡಿದ್ದು ಸದರಿ ನೋಟೀಸ್ಸಿನ ಕಛೇರಿ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅದನ್ನು ನಿಪಿ-2 ಎಂದು, 5 ಅಂಚೆ ರಸೀದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-3 ರಿಂದ 7 ಎಂದು, ಸದರಿ ನೋಟೀಸ್ಸುಗಳು ಜಾರಿಯಾಗದೆ ಹಿಂದಕ್ಕೆ ಬಂದಿದ್ದು

ಸದರಿ ನೋಟೀಸ್ಸಿನ 4 ಲಕೋಟೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-8 ರಿಂದ 11 ಎಂದು, ನಿಪಿ-8 ರಿಂದ 11ನ್ನು ನ್ಯಾಯಾಲದ ಅನುಮತಿ ಪಡೆದು ಹೊಡೆದು ನೋಡಿ ಅದರಲ್ಲಿನ ನೋಟೀಸ್ಸಿನ ಪ್ರತಿಗಳನ್ನು ನಿಪಿ-8(ಎ) ಇಂದ ನಿಪಿ-11(ಎ) ಎಂದು ಗುರ್ತಿಸಲಾಯಿತು. ಸದರಿ ನಿಪಿ-2ಕ್ಕೆ 2ನೇ ಪ್ರತಿವಾದಿಯು ಪ್ರತ್ಯುತ್ತರವನ್ನು ನೀಡಿದ್ದು ಸದರಿ ಪ್ರತ್ಯುತ್ತರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅದನ್ನು ನಿಪಿ-12 ಎಂದು ಗುರ್ತಿಸಲಾಯಿತು.

**ಕ್ರಯಪತ್ರದ ಮುದ್ರಾಂಕ ಶುಲ್ಕದ ಮೇಲೆ ಆದೇಶವಾದ ನಂತರ ಮುಂದಿನ ಮುಖ್ಯವಿಚಾರಣೆಗೆ ಸಮಯವನ್ನು ಕೋರಲಾಗಿದ್ದು ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)**

**ಓ ಹೇ ಕೇ ಸರಿ ಇದೆ.**

**(ಎ.ಸಿ.ದಯಾನಂದ ಮೂರ್ತಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಬಂಗಾರಪೇಟೆ.**